H.K.E.Society's
Sir. M. Visvesvaraya College of Engineering

(Affiliated to VTU - Belagavi, Approved by AICTE – New Delhi, Accredited by NAAC)
YeramarusCamp, Raichur – 584135

Glimpses of 4th IEEE International Conference

4th IEEE International Conference was held on 22nd May 2026 and 23rd May 2026

SUDDI MOOLA PUBLISHERS INDIA LIMITED

ಸುದ್ದಿಮೂಲ

ಮೂಲ - ಮೂಲದ ನಿಖರತೆಗೆ

SUDDI MOOLA Karnada Daily

ಸರ್. ಎಂ. ವಿಶ್ವೇಶ್ವರಯ್ಯ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಐಸಿಐಸಿಎಸಿಎಸ್ ಸಮ್ಮೇಳನ

ವಿಪುಲ ಉದ್ಯೋಗಾವಕಾಶ ಸೃಷ್ಟಿಗೆ ವೇದಿಕೆ - ಡಾ. ಯಮಂಕಾ ಅಕ್ಕೆರ ಅಭಿಮತ

●ಸುದ್ದಿಮೂಲ ವಾರ್ತೆ

ರಾಯಚೂರು, ಮೇ.22:

ಇಂಟರ್‌ನ್ಯಾಷನಲ್ ಕಾನ್ಫರೆನ್ಸ್ ಆನ್ ಇಂಟಿಗ್ರೇಟೆಡ್ ಸರ್ಕ್ಯೂಟ್ಸ್, ಆ್ಯಂಡ್ ಕಮ್ಯೂನಿಕೇಷನ್ ಸಿಸ್ಟಮ್ಸ್ ಸಮ್ಮೇಳನ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶದ ಬಾಗಿಲು ತೆರೆಯುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ ಎಂದು ಜಪಾನ್ ದೇಶದ ಅಕ್ಕೆರ ಯಮಿಮೆ ವಿಶ್ವವಿದ್ಯಾಲಯದ ಡಾ.ಯಮಂಕಾ ಅಕ್ಕೆರ ಹೇಳಿದರು.

ಅವರು ಶುಕ್ರವಾರ ನಗರದ ಹೆಚ್. ಕೆ.ಇ. ಸಂಸ್ಥೆಯ ಸರ್. ಎಂ. ವಿಶ್ವೇಶ್ವರಯ್ಯ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಇ ಎಂಡ್ ಸಿಇ ವಿಭಾಗದಿಂದ ಇಂಟರ್ ನ್ಯಾಷನಲ್ ಕಾನ್ಫರೆನ್ಸ್ ಆನ್ ಇಂಟಿಗ್ರೇಟೆಡ್ ಸರ್ಕ್ಯೂಟ್ಸ್, ಆ್ಯಂಡ್ ಕಮ್ಯೂನಿಕೇಷನ್ ಸಿಸ್ಟಮ್ಸ್ (ಐಸಿಐಸಿಎಸಿಎಸ್) ಸಮ್ಮೇಳನದ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು.

ಈ ಅಂತಾರಾಷ್ಟ್ರೀಯ ಸಮ್ಮೇಳನದಿಂದ ವಿದ್ಯಾರ್ಥಿಗಳಲ್ಲಿ ಉತ್ತಮ ಕೈಗಾರಿಕ ಅಭಿವೃದ್ಧಿ ಹಾಗೂ ಸಂಶೋಧನೆ ಮಾಡುವ ವಿದ್ಯಾರ್ಥಿಗಳಲ್ಲಿ ಸಂಶೋಧನಾ ಕೌಶಲ್ಯ ವೃದ್ಧಿ ಮತ್ತು ಜಾಗತಿಕ ಮಟ್ಟದಲ್ಲಿ ಉತ್ತಮ ಉದ್ಯೋಗಾವಕಾಶ ದೊರೆಯಲು ಸಹಕಾರಿಯಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಹೈದರಾಬಾದ್ ಐಐಟಿ ಪ್ರೊಫೆಸರ್ ಡಾ॥ ಸಿ.ಕೃಷ್ಣಮೋಹನ್ ಮಾತನಾಡಿ ಇಂದಿನ ಎಲ್ಲಾ ತಾಂತ್ರಿಕ ವಿಭಾಗದ ವಿದ್ಯಾರ್ಥಿಗಳಿಗೆ ಜಾಗತಿಕ ಮಟ್ಟದಲ್ಲಿ ಉಜ್ಜ್ವಲ ಭವಿಷ್ಯವಿದೆ. ಆದಕ್ಕಾಗಿ ವಿದ್ಯಾರ್ಥಿಗಳು ಮೊದಲಿನಿಂದಲೂ ಸತತ ಪ್ರಯತ್ನ ಹಾಗೂ ಆತ್ಮವಿಶ್ವಾಸ ಹೊಂದಿರಬೇಕೆಂದು ಸಲಹೆ ನೀಡಿದರು.

ವಿಟಿಯು ಪ್ರಾದೇಶಿಕ ನಿರ್ದೇಶಕ ಡಾ॥ಶಭಭಾಗಿರಿ ಮಾತನಾಡಿ,●6ನೇ ಪುಟಕ್ಕೆ

May 23, 2026 | Page No: 3 | epaper.suddimoola.in
Powered By KHUSHIHOST ® | License - ePaperCloud.com

SUDDI MOOLA PUBLISHERS INDIA LIMITED

ಸುದ್ದಿಮೂಲ

ಮೂಲ - ಮೂಲದ ನಿಖರತೆಗೆ

SUDDI MOOLA Karnada Daily

ವಿಪುಲ ಉದ್ಯೋಗಾವಕಾಶ ಸೃಷ್ಟಿಗೆ ವೇದಿಕೆ

ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಹೆಚ್ಚು ತೊಡಗಿಸಿಕೊಳ್ಳಲು ಸಲಹೆಕೊಟ್ಟರು ಹಾಗೂ ಈ ಸಮ್ಮೇಳನವನ್ನು ಆಯೋಜನೆ ಮಾಡಿದ್ದಕ್ಕಾಗಿ ಕಾಲೇಜಿನ ಇ ಆ್ಯಂಡ್ ಸಿಇ ವಿಭಾಗದ ಸಿಬ್ಬಂದಿಯನ್ನು ಅಭಿನಂದಿಸಿದರು.

ರಾಯಚೂರು ಐಐಐಟಿ ನಿರ್ದೇಶಕ ಡಾ॥ಹರೀಶ್ ಕುಮಾರ್ ಸರದಾನ ಮಾತನಾಡಿ, ಕೇಂದ್ರ ಸರಕಾರ ವಿದ್ಯಾರ್ಥಿಗಳ ಸರ್ವತೋಮುಖಿ ಅಭಿವೃದ್ಧಿಗೆ ಅನೇಕ ಯೋಜನೆಗಳನ್ನು ರೂಪಿಸಿದ್ದಾರೆ, ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆದುಕೊಂಡು ಹೆಚ್ಚಿನ ಯಶಸ್ಸುಗಳಿಸಲು ಸಲಹೆ ನೀಡಿದರು.

ಕಾಲೇಜಿನ ಪ್ರಾಚಾರ್ಯ ಡಾ॥ ಶರಣಕುಮರ್ ಮಾತನಾಡಿ, ವಿದ್ಯಾರ್ಥಿಗಳು ಹೆಚ್ಚಿನ ಪ್ರಮಾಣದಲ್ಲಿ ಇಂತಹ ಸಮ್ಮೇಳನದಲ್ಲಿ ಭಾಗವಹಿಸಿ ಕೌಶಲ್ಯ, ಜಾಗತಿಕ ಮಟ್ಟದ ಜ್ಞಾನ ಹಾಗು ಆತ್ಮವಿಶ್ವಾಸ ವೃದ್ಧಿಸಿಕೊಂಡು ಜೀವನದಲ್ಲಿ ಯಶಸ್ವಿ ಹೊಂದಬೇಕು ಎಂದರು.

ಡಾ॥ ಪಿ.ವಿಶ್ವನಾಥ ಮಾತನಾಡಿ ಸಮ್ಮೇಳನದ ಉದ್ದೇಶ ವಿವರಿಸುತ್ತಾ ಕಾಲೇಜಿನ ವಿದ್ಯಾರ್ಥಿಗಳು ಈ ಸಮ್ಮೇಳನದ ಸದುಪಯೋಗ ಪಡೆದುಕೊಂಡು ಜೀವನದ ಗುರಿ ತಲುಪಲು ತಿಳಿಸಿದರು.

ಹೆಚ್.ಕೆ.ಇ.ಸಂಸ್ಥೆಯ ಅಧ್ಯಕ್ಷರಾದ ಡಾ:ಶಶಿಲ್ ಜಿ ನಮೋಶಿ, ಹೆಚ್. ಕೆ.ಇ. ಸಂಸ್ಥೆಯ ಆಡಳಿತ ಮಂಡಳಿ ಸದಸ್ಯರು ಹಾಗೂ ಕಾಲೇಜಿನ ಸಂಚಾಲಕ ನಿಶಾಂತ್ ಜಿ. ಎಲಿ ಹಾಗೂ ಸಂಸ್ಥೆಯ ಎಲ್ಲಾ ಆಡಳಿತ ಮಂಡಳಿಯ ಸದಸ್ಯರುಗಳು ಈ ಅಂತರಾಷ್ಟ್ರೀಯ ಸಮ್ಮೇಳನಕ್ಕೆ ಶುಭ ಹಾರೈಸಿದರು.

ಈ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ವಿವಿಧ ದೇಶದ ಸ್ಕಾಲರ್ಸ್ ಹಾಗೂ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಪ್ರೊ॥ ಬಸಮ್ಮ ಪಾಟೀಲ್ ನಿರೂಪಿಸಿದರು, ಪ್ರೊ॥ ಶಿಲ್ಪಾ ಪಾಟೀಲ್ ವಂದಿಸಿದರು.

May 23, 2026 | Page No: 7 | epaper.suddimoola.in
Powered By KHUSHIHOST ® | License - ePaperCloud.com

https://www.epaper.raichurvani.com

ರಾಯಚೂರವಾಣಿ

RAICHURVANI

ಸರ್. ಎಂ. ವಿಶ್ವೇಶ್ವರಯ್ಯ ತಾಂತ್ರಿಕ ಮಹಾವಿದ್ಯಾಲಯದಲ್ಲಿ 4ನೇ ಅಂತಾರಾಷ್ಟ್ರೀಯ ಐಸಿಐಸಿಎಸಿಎಸ್ ಸಮ್ಮೇಳನ

ಅಂತಾರಾಷ್ಟ್ರೀಯ ಸಮ್ಮೇಳನಗಳು ವಿದ್ಯಾರ್ಥಿಗಳ ಸಂಶೋಧನಾ ಕೌಶಲ್ಯವೃದ್ಧಿಗೆ ಸಹಕಾರಿ- ಡಾ॥ ಯಮಂಕಾ ಅಕ್ಕೆರ

ರಾಯಚೂರು,ಮೇ.22- ನಗರದ ಹೆಚ್.ಕೆ.ಇ. ಸಂಸ್ಥೆಯ ಸರ್. ಎಂ. ವಿಶ್ವೇಶ್ವರಯ್ಯ ತಾಂತ್ರಿಕ ಮಹಾವಿದ್ಯಾಲಯದ ಡಾ॥ ಯಮಂಕಾ ಅಕ್ಕೆರ ಅಂತಾರಾಷ್ಟ್ರೀಯ ಸಮ್ಮೇಳನದಿಂದ ವಿದ್ಯಾರ್ಥಿಗಳಿಗೆ, ಉತ್ತಮ ಕೈಕೈಗಾರಿಕ ಅಭಿವೃದ್ಧಿ ಹಾಗೂ ಸಂಶೋಧನೆ ಮಾಡುವ ಮಾಡುವ ವಿದ್ಯಾರ್ಥಿಗಳಿಗೆ ಸಹಕಾರಿ ಆಗುತ್ತದೆ ಎಂದು ಹೇಳಿದರು.

ಅತಿಥಿಗಳಾಗಿದ್ದ ಏಷಿಯಾ ಪ್ರಾದೇಶಿಕ ಕಚೇರಿಯ ನಿರ್ದೇಶಕ ಡಾ॥ ಶಭಭಾಗಿರಿ ಮಾತನಾಡಿ, ಯುವ ಜಾಣ ಸಂಶೋಧಕರು ಸಮ್ಮೇಳನದಲ್ಲಿ ಭಾಗವಹಿಸಿದ್ದಕ್ಕೆ ಹರ್ಷ ವ್ಯಕ್ತಪಡಿಸಿ, ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಹೆಚ್ಚು ತೊಡಗಿಸಿ ಕೌಶಲ್ಯ ಸಂಪಾದಿಸಲು ಸಲಹೆ ನೀಡಿದರು. ಅಂತಾರಾಷ್ಟ್ರೀಯ ಸಮ್ಮೇಳನವನ್ನು ಆಯೋಜನೆ ಮಾಡಿದ್ದಕ್ಕಾಗಿ ಕಾಲೇಜಿನ ಇ ಎಂಡ್ ಸಿಇ ವಿಭಾಗದ ಸಿಬ್ಬಂದಿಯನ್ನು ಅಭಿನಂದಿಸಿದರು.

ಅತಿಥಿಗಳಾಗಿದ್ದ ಪ್ರೊಫೆಸರ್ ಐಐಟಿಯ ಸಿಎಸ್ ಆ್ಯಂಡ್ ಇ ವಿಭಾಗದ ಪ್ರೊಫೆಸರ್ ಡಾ॥ ಸಿ.ಕೃಷ್ಣ ಮೋಹನ್ ಮಾತನಾಡಿ ,ಇಂದಿನ ಎಲ್ಲಾ ತಾಂತ್ರಿಕ ವಿಭಾಗದ ವಿದ್ಯಾರ್ಥಿಗಳಿಗೆ ಜಾಗತಿಕ ಮಟ್ಟದಲ್ಲಿ ಉಜ್ಜ್ವಲ ಭವಿಷ್ಯವಿದೆ. ಆದಕ್ಕಾಗಿ ವಿದ್ಯಾರ್ಥಿಗಳು ಮೊದಲಿನಿಂದಲೂ ಸತತ ಪ್ರಯತ್ನ ಹಾಗೂ ಆತ್ಮ ವಿಶ್ವಾಸ ಹೊಂದಿರಬೇಕೆಂದು ಕರೆಕೊಟ್ಟರು.

ಅತಿಥಿಗಳಾಗಿದ್ದ ಏಷಿಯಾ ಪ್ರಾದೇಶಿಕ ಕಚೇರಿಯ ನಿರ್ದೇಶಕ ಡಾ॥ ಶಭಭಾಗಿರಿ ಮಾತನಾಡಿ , ಯುವ ಜಾಣ ಸಂಶೋಧಕರು ಸಮ್ಮೇಳನದಲ್ಲಿ ಭಾಗವಹಿಸಿದ್ದಕ್ಕೆ ಹರ್ಷ ವ್ಯಕ್ತಪಡಿಸಿ, ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಹೆಚ್ಚು ತೊಡಗಿಸಿ ಕೌಶಲ್ಯ ಸಂಪಾದಿಸಲು ಸಲಹೆ ನೀಡಿದರು. ಅಂತಾರಾಷ್ಟ್ರೀಯ ಸಮ್ಮೇಳನವನ್ನು ಆಯೋಜನೆ ಮಾಡಿದ್ದಕ್ಕಾಗಿ ಕಾಲೇಜಿನ ಇ ಎಂಡ್ ಸಿಇ ವಿಭಾಗದ ಸಿಬ್ಬಂದಿಯನ್ನು ಅಭಿನಂದಿಸಿದರು.

ಏಷಿಯಾ ಸುತ್ತಾ ಕಾಲೇಜಿನ ವಿದ್ಯಾರ್ಥಿಗಳು ಈ ಸಮ್ಮೇಳನದ ಸದುಪಯೋಗ ಪಡೆದುಕೊಂಡು ಜೀವನದ ಗುರಿ ತಲುಪಲು ತಿಳಿಸಿದರು.

ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ವಿವಿಧ ದೇಶದ ಸ್ಕಾಲರ್ಸ್, ಹಾಗೂ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕಾರ್ಯಕ್ರಮ ಪ್ರೊ॥ ಬಸಮ್ಮ ಪಾಟೀಲ್ ನಿರೂಪಿಸಿದರು, ಪ್ರೊ. ಶಿಲ್ಪಾ ಪಾಟೀಲ್ ವಂದಿಸಿದರು.

ಹೆಚ್.ಕೆ.ಇ.ಸಂಸ್ಥೆಯ ಅಧ್ಯಕ್ಷರಾದ ಡಾ:ಶಶಿಲ್ ಜಿ ನಮೋಶಿ, ಹೆಚ್. ಕೆ.ಇ. ಸಂಸ್ಥೆಯ ಆಡಳಿತ ಮಂಡಳಿ ಸದಸ್ಯರು ಹಾಗೂ ಕಾಲೇಜಿನ ಸಂಚಾಲಕರಾದ ನಿಶಾಂತ್ ಜಿ ಎಲಿ, ಸಂಸ್ಥೆಯ ಎಲ್ಲಾ ಆಡಳಿತ ಮಂಡಳಿಯ ಸದಸ್ಯರುಗಳು ಈ ಅಂತಾರಾಷ್ಟ್ರೀಯ ಸಮ್ಮೇಳನಕ್ಕೆ ಶುಭ ಹಾರೈಸಿದರು.

May 23, 2026 | Page No: 8 | epaper.raichurvani.com
Powered By KHUSHIHOST ® | License - ePaperCloud.com